International Journal of Kannada Research 2015; 1(1): 14-15




International Journal of Kannada Research
www.kannadajournal.com

ISSN: 2454–5813
IJSR 2015; 1(1): 14-15
© 2015 IJKS
www.kannadajournal.com
Received: 24-06-2015
Accepted: 25-07-2015

**Babu Pujari**
H.O.D., Dept. of Kannada,
Sangameshwar Degree College,
Sholapur, Maharastra-413001.

**Correspondence**
**Babu Pujari**
H.O.D., Dept. of Kannada,
Sangameshwar Degree College,
Sholapur, Maharastra-413001.

# ಅಷ್ಟಾವರಣ

## Babu Pujari

ಅಷ್ಟಾವರಣಗಳು ಮಲತ್ರಯಗಳಿಂದ ರಕ್ಷಿಸುವ ಆವರಣಗಳು. ಗುರು-ಲಿಂಗ-ಜಂಗಮ-ವಿಭೂತಿ-ರುದ್ರಾಕ್ಷಿ-ಮಂತ್ರ-ಪಾದೋದಕ-ಪ್ರಸಾದ ಇವೇ ಅಷ್ಟಾವರಣಗಳು. ಗುರು-ಲಿಂಗ-ಜಂಗಮ ಇವು ಮೂರು ಉಪಾಸ್ಯ ಮೂರ್ತಿಗಳು. ವಿಭೂತಿ-ರುದ್ರಾಕ್ಷಿ-ಮಂತ್ರ ಮೂರು ಉಪಾಸಿಸುವ ಸಾಧನಗಳು. ಪಾದೋದಕ-ಪ್ರಸಾದ ಇವು ಸಾಧಕನಿಗೆ ದೊರೆಯುವ ಗುರುಕಾರಣ್ಯ ಫಲ.
ಊರಿಗೆ ಕೋಟೆ ಇರುವಂತೆ, ಯೋಧನಿಗೆ ಕವಚ ಇರುವಂತೆ ಸಾಧಕನಿಗೆ ಅಷ್ಟಾವರಣದ ಅಗತ್ಯವಿದೆ. ಇದು ಬಾಹ್ಯ ಅಷ್ಟಾವರಣ ಆಂತರಿಕ ಅಷ್ಟಾವರಣ ಎಂದು ಎರಡು ವಿಧ. ಬಾಹ್ಯ ಅಷ್ಟಾವರಣಗಳು ಸ್ಥೂಲ-ಸೂಕ್ಷ್ಮ-ಶರೀರಕ್ಕೆ ಸಂಬಂಧಿಸಿದ್ದು; ಆಂತರಿಕ ಅಷ್ಟಾವರಣಗಳು ಕಾರಣ ಶರೀರಕ್ಕೆ ಸಂಬಂಧಿಸಿವೆ. ಸ್ಥೂಲ ಶರೀರದಲ್ಲಿಯ ಅಷ್ಟಾವರಣಗಳು ತನು-ಮನ-ಪ್ರಾಣ-ಮುಖ-ಮೂಗು-ತ್ವಕ್-ನೇತ್ರ-ಕರ್ಣಗಳಿಗೆ ಬಾಹ್ಯ ಅಷ್ಟಾವರಣಗಳಾಗಿವೆ. ಕಾರಣ ಶರೀರದಲ್ಲಿಯ ಅರಿವು, ಆತ್ಮ, ಅನುಭವ, ಅಂತಃಕರಣ, ಪ್ರಸನ್ನತೆ, ನಿಷ್ಕಾಮ, ನಿರ್ಮೋಹ, ಅನಾಹತ ಇವು ಆಂತರಿಕ ಅಷ್ಟಾವರಣಗಳು. ಗುರು, ಲಿಂಗ, ಜಂಗಮರು ಅಗೋಚರ ಪರಮಾತ್ಮನ ವ್ಯಕ್ತರೂಪಗಳು. ವಿಭೂತಿ, ರುದ್ರಾಕ್ಷಿ, ಮಂತ್ರಗಳು ಉಪಾಸನೆಯ ಸಾಧನಗಳು. ಪಾದೋದಕ, ಪ್ರಸಾದ ಸಾಧಕನಿಗೆ ದೊರೆಯುವ ದಿವ್ಯಲಾಭ.

### ಪಂಚಾಚಾರ

ವೀರಶೈವ ಧರ್ಮದಲ್ಲಿ ಇತರ ಧರ್ಮಗಳಂತೆ ಆಚರಣೆಗೆ ಮಹತ್ವದ ಸ್ಥಾನವುಂಟು. ಪಾಂಚಾಚಾರಗಳು ಪ್ರಾಣದ ಸ್ವರೂಪ. ದೇಹ ಮತ್ತು ಆತ್ಮವನ್ನು ಕೂಡಿಸುವ ಕೊಂಡಿ ಪಂಚಾಚಾರಗಳು ನೈತಿಕ ಪಾವಿತ್ರ್ಯ, ನಡೆನುಡಿಯ ಶುಚಿತ್ವ, ಮನದ ಕ್ಲೇಶವನ್ನು ಕಳೆಯುವ ಸಾಧನ ಎಂದರೆ ಪಂಚಾಚಾರಗಳು. ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ ಹಾಗೂ ಗಣಾಚಾರ ಇವೇ ಪಂಚಾಚಾರಗಳು.

### ಲಿಂಗಾಚಾರ

ನಿಷ್ಠೆಯ ಲಿಂಗಪೂಜೆಯನ್ನು, ಲಿಂಗಧರಿಸಬೇಕೆಂಬುದನ್ನು, ಒಬ್ಬ ದೇವನನ್ನೇ ಧ್ಯಾನಿಸಬೇಕೆಂಬುದನ್ನೂ ಸ್ಥಾವರ ಪೂಜೆ ಸಲ್ಲದೆಂದೂ, ಎಲ್ಲವೂ ಲಿಂಗಸ್ವರೂಪವೆಂದೂ, ಪೂಜೆ ಆತನೇ ಕೈಯ್ಯಾರೆ ಮಾಡಬೇಕೆಂದೂ, ತಿಳಿಸಿಕೊಡುವುದೇ ಲಿಂಗಾಚಾರ.

### ಸದಾಚಾರ

ಸದಾಚಾರದಲ್ಲಿ ಸಾಧಕನು ಲಿಂಗಸಂಬಂಧಿಗಳೆಲ್ಲ ಒಪ್ಪುವ ಮಾರ್ಗದಲ್ಲಿ ನಡೆಯಬೇಕು. ಗುರುಲಿಂಗಜಂಗಮರಿಗೆ ತನುಮನಧನವನರ್ಪಿಸಬೇಕು. ನಿತ್ಯವೂ ಸತ್ಯಶುದ್ಧ ಕಾಯಕ ಮಾಡಬೇಕು. ಕಾಯಕದಿಂದ ಬಂದುದರಲ್ಲಿ ದಾಸೋಹ ನಡೆಸಬೇಕು. ಎಲ್ಲ ಕಾಯಕವೂ ಸಮಾನವೆಂದು ತಿಳಿಯಬೇಕು. ಶೀಲ, ಆಚಾರ, ಕಾಯಕ, ಭವಿಸಂಗದೂರ, ಪ್ರಸನ್ನತೆ, ಜ್ಞಾನ, ಇವೆಲ್ಲ ಸದಾಚಾರದ ಮೂಲ ಮಂತ್ರಗಳಾಗಿವೆ.

### ಶಿವಾಚಾರ

ಅಂಗಗುಣಗಳನ್ನು ಅಳಿದು ಲಿಂಗಗುಣಗಳನ್ನು ಧರಿಸುವುದೇ ಶಿವಾಚಾರ. ಎಲ್ಲರೂ ಶಿವಸ್ವರೂಪಿಗಳೆಂದು ತಿಳಿವುದು, ಜಾತಿ-ಮತ-ಲಿಂಗ-ವಯಸ್ಸು-ಕಾಯಕ ಭೇದ ಎಣಿಸದೆ ಎಲ್ಲರೂ ಸಮಾನರೆಂದು ನಡೆವುದೇ ಶಿವಾಚಾರ. ಜಗತ್ತೆಲ್ಲ ಶಿವಸ್ವರೂಪ ಎಂದು ವಿಶ್ವಾಸದಿಂದ ವರ್ತಿಸುವುದು; ಶಿವಾಚಾರವೆಂದರೆ ಬಾಳಬಾಯ ಧಾರೆ ಎಂದು ಕರೆಯಲಾಗಿದೆ. ಆಸೆ, ರೋಷ, ಹರುಷಗಳಿಗೆ ಈಡಾಗದೆ ಆಚಾರ ನಿಷ್ಠನಾಗಿರುವುದೇ ಶಿವಾಚಾರವಾಗಿದೆ.

**ಭೃತ್ಯಾಚಾರ**

ಗುರು-ಲಿಂಗ-ಜಂಗಮ ಸ್ವರೂಪಿಗಳು ಯಾರೆ ಇರಲಿ 'ಅಹಂ' ಅಳಿದು ಸೋಹಂ ತಿಳಿದು ದಾಸೋಹಿಯಾಗಿರುವುದೇ ಭೃತ್ಯಾಚಾರ. ಭೃತ್ಯ ಎಂದರೆ ಸೇವಕ. ಈ ಭೃತ್ಯ ಭಾವದಿಂದಲೇ ಸಮಾಜದಲ್ಲಿ ಸಾಮರಸ್ಯ ಬೆಳೆಯುವುದು ಸಾಧ್ಯವಾಗುತ್ತದೆ. ಸಮಾನತೆ ಬೆಳೆಯಲು ಸಾಧ್ಯವಾಗುತ್ತದೆ. ಭೃತ್ಯ ಎಂದರೆ ಕೀಳು, ಆಳು ಎಂದು ತಿಳಿವ ಕಾರಣವಿಲ್ಲ. ಕೈಮುಗಿದು ಕಾಲಿಗೆ ಎರಗುವುದು ಎಂದಲ್ಲ. ಶೌರ್ಯ-ಸಾಹಸ-ಪಾಂಡಿತ್ಯ ಐಶ್ವರ್ಯ ಇದ್ದರೂ ವಿನಯ ಇರದಿದ್ದರೆ ಅದಕ್ಕೆ ಬೆಲೆಯಿಲ್ಲ. ವಿನಯದಿಂದ ಆ ಗುಣಗಳಿಗೆ ಬಂಗಾರದ ಗುಣ ಬರುತ್ತದೆ. ಆದ್ದರಿಂದ ಗುರು-ಲಿಂಗ-ಜಂಗಮರಿಗೆ ಭೃತ್ಯ ಭಾವದಿಂದ ಸೇವೆ ಸಲ್ಲಿಸುವುದು ಎಂದರೆ ಗುಲಾಮಗಿರಿ ಅಲ್ಲ. ಏಕೆಂದರೆ ಸೇವೆ ಪಡೆಯುವವರು ಇಲ್ಲಿ ಭೃತ್ಯಭಾವದಿಂದಲೇ ನಡೆದುಕೊಳ್ಳುತ್ತಾರೆ. ಸೇವಾಭಾವ ಬಹಳ ಮುಖ್ಯ. ಬಂದವರಿಗೆ 'ಬನ್ನಿರಿ' ಎನ್ನದವನ ಬಾಳೇನು ಬಾಳೆ? ಆದರದಿಂದ ಕರೆಯುವುದೇ ಭೃತ್ಯಭಾವ.

**ಗಣಾಚಾರ**

ಸಮಾಜದ ಜನರೊಂದಿಗೆ ಕೂಡಿ ಬಾಳುವುದೇ ಗಣಾಚಾರ. ಅಷ್ಟಾವರಣ-ಷಟಸ್ಥಲಗಳಲ್ಲಿ ವಿಶ್ವಾಸವಿಟ್ಟು ಅದರಂತೆ ತಪ್ಪದೆ ನಡೆಯುವೆನೆಂಬುದೇ ಗಣಾಚಾರ. ಗಣಾಚಾರ ವೀರತನದ, ಛಲದ ಲಕ್ಷಣ. ಗುರು-ಲಿಂಗ-ಜಂಗಮದ ಅಪಮಾನ ಕೇಳದಿರುವುದು. ದುಷ್ಟರನ್ನು ಮರ್ದಿಸುವುದು, ದುಷ್ಟಗುಣಗಳನ್ನು ಅಳಿಸುವುದು, ಅದಕ್ಕಾಗಿ ತನ್ನನ್ನೇ ದಂಡಿಸಿಕೊಳ್ಳುವುದು ಗಣಾಚಾರದ ವಿಶೇಷತೆಯಾಗಿದೆ. ಧರ್ಮವೀರರಾಗಿ, ಧರ್ಮನಿಂದೆ ಕೇಳದೆ, ಧರ್ಮ ಪ್ರಸಾರ ಮಾಡುತ್ತ, ಇತರ ಧರ್ಮಗಳನ್ನು ಗೌರವಿಸುತ್ತ ಬದುಕುವುದೇ ಗಣಾಚಾರ.

ಹೀಗೆ ಪಂಚಾಚಾರಗಳು ಮನುಷ್ಯನ ನೀತಿ-ರೀತಿ ಶಾಂತಿ ಸಂಯಮ-ಸಮಾಧಾನ-ಉನ್ನತಿ- ಸ್ನೇಹ- ವಿಶ್ವಾಸ-ನಿಷ್ಠೆ-ಪ್ರೀತಿಯನ್ನು ಬೆಳೆಸುವ ಆಚಾರ ಮಾರ್ಗಗಳಾಗಿವೆ. ಇದರಿಂದ ವೈಯ್ಯಕ್ತಿಕ ಪ್ರಗತಿಯೊಂದಿಗೆ ಸಮಾಜ-ರಾಷ್ಟ್ರ ಪ್ರಗತಿಯೂ ಖಂಡಿತ ಸಾಧ್ಯವಿದೆ ಎನ್ನಬಹುದು.

ಚನ್ನಬಸವಣ್ಣನವರು ಐವತ್ತು ಆಚಾರಗಳನ್ನು ತಮ್ಮ ವಚನದಲ್ಲಿ ಹೇಳಿದ್ದಾರೆ*. ಅವೆಲ್ಲ ಪಂಚಾಚಾರದಲ್ಲಿ ಸಮಾವೇಶಗೊಳ್ಳುವುದರಿಂದ ಇಲ್ಲಿ ವಿವರಿಸಲು ಹೋಗಿಲ್ಲ.

**ಷಟ್‌ಸ್ಥಲಗಳು**

ಷಟ್‌ಸ್ಥಲಗಳು ವೀರಶೈವ ಸಾಧಕನ ಸಾಧನೆಯನ್ನು ಕ್ರಮವಾಗಿ ಸೂಚಿಸುತ್ತವೆ. ಅವನು ಸಾಧನೆಯಲ್ಲಿ ಪ್ರಗತಿ ಸಾಧಿಸುತ್ತಿರುವುದರ ಲಕ್ಷಣ ಈ ಷಟ್‌ಸ್ಥಲಗಳು.

*** ಹಿರೇಮಠ ಆರ್.ಸಿ. (ಸಂ) ಚನ್ನಬಸವಣ್ಣನವರ ವಚನಗಳು-ವ-೧೧೨.**

ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಇವೇ ಆರು ಸ್ಥಲಗಳು. ಇವು ಶರಣನ ನಿಲವನ್ನು, ಹಿರಿಮೆಯನ್ನು ತಿಳಿಸಿಕೊಡುತ್ತವೆ. ಸಾಧಕನು ಇವುಗಳಲ್ಲಿ ಒಂದೊಂದೇ ಏಣಿಯನ್ನು ಏರುತ್ತ ಹೋಗುತ್ತಾನೆ. ಸಾಧಕನ ಸಾಧನೆ ಬೆಳೆದಂತೆ ಚಿಂತನ-ಮನನ-ಜ್ಞಾನ-ಅರಿವು ಇವೂ ಬೆಳೆಯುತ್ತ ಹೋಗುತ್ತವೆ. ಚಿಂತನ ಬೆಳೆದಂತೆ ಅವನ ಅರಿವು ಆಚಾರಗಳಲ್ಲೂ ಗಟ್ಟಿಯಾದ ನಿಷ್ಠೆ ಬೆಳೆಯುತ್ತದೆ. ತನುಶುದ್ಧಿ, ಮನಶುದ್ಧಿ, ಧನಶುದ್ಧಿಯಾಗಿ ದುರ್ವಿಚಾರ, ದುರ್ಜನಸಂಗ, ಸೋಮಾರಿತನದಿಂದ ದೂರವಾಗಿ ಸಾಧನೆ ಗೈಯ್ಯುವುದೇ ಷಟ್‌ಸ್ಥಲದ ಗುರಿ. ಇದರಲ್ಲಿ ಕ್ರಮಸಮುಚ್ಚಯ ಸಮಸಮುಚ್ಚಯ ಎಂದು ಎರಡು ಬಗೆ. ಭಕ್ತ-ಮಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯ ಹೀಗೆ ಕ್ರಮವಾಗಿ ಒಂದಾದ ನಂತರ ಒಂದರಂತೆ ಸಾಧಿಸುವುದು ಕ್ರಮ ಸಮುಚ್ಚಯ. ಅದರಂತೆ ಭಕ್ತ ಸ್ಥಲದಲ್ಲೇ ಉಳಿದೆಲ್ಲ ಸ್ಥಲಗಳನ್ನು ಸಾಧಿಸುವುದು ಸಮಸಮುಚ್ಚಯ. ಭಕ್ತ ಸ್ಥಲದಲ್ಲೇ ಐಕ್ಯಸ್ಥಲವೂ ಉಂಟೆಂದು ಅದರ ಅರ್ಥ. ಆದ್ದರಿಂದ ಒಂದೊಂದು ಸ್ಥಲದಲ್ಲೂ ಆರು ಸ್ಥಲಗಳಾಗಿ ಒಟ್ಟು ಮೂವತ್ತಾರು ಸ್ಥಲಗಳೆಂದು ತಾತ್ವಿಕವಾಗಿ ಹೇಳಲಾಗಿದೆ.

**ಭಕ್ತ**

ಜೀವಾತ್ಮನು ಪರಮಾತ್ಮನ ಅಂಶ. ಆದ್ದರಿಂದ ಜೀವಾತ್ಮನು ಪರಿಪೂರ್ಣ. ಆದರೆ ಮನದ ಮೇಲೆ ಆಣವ-ಮಾಯಾ-ಕಾರ್ಮಿಕ ಮಲಗಳು ಸೇರಿ ಜೀವಾತ್ಮನನ್ನು ಅಜ್ಞಾನದಲ್ಲಿ ದೂಡಿವೆ. ಈ ಮಲತ್ರಯಗಳನ್ನು ಕಳೆದು ಜ್ಞಾನ ನೀಡುವವನೇ ಗುರು. ಅವನಿಂದ ಷಟಸ್ಥಲ-ಪಂಚಾಚಾರ-ಅಷ್ಟಾವರಣಗಳನ್ನು ಅರಿತು ಆಚರಿಸುವುದೇ ಭಕ್ತನ ಲಕ್ಷಣ. ಇದರಿಂದ ಅವನ ಅಜ್ಞಾನ ಕಳೆದು ಸುಜ್ಞಾನ ಮೂಡುತ್ತದೆ. ಲಿಂಗ ಧರಿಸಿ, ಭಸ್ಮ ಧರಿಸಿ, ನಂಬುಗೆಯಿಂದ ಪೂಜಿಸುವುದು, ಶರೀರ-ಮನ- ಪ್ರಾಣಗಳಲ್ಲಿ ಅಭಿಮಾನ ಬಿಡುವುದು, ಸತ್ಯಶುದ್ಧ ಕಾರ್ಯ ನಡೆಸುವುದು, ಗುರು-ಲಿಂಗ-ಜಂಗಮಕ್ಕೆ ತನು-ಮನ-ಧನ ಅರ್ಪಿಸುವುದು, ದಾಸೋಹಿಯಾಗಿರುವುದು ಸಾಧಕ ಭಕ್ತನ ಲಕ್ಷಣ.

**ಮಹೇಶ**

ಅಚಲ ಶ್ರದ್ಧೆ, ಜ್ಞಾನನಿಷ್ಠೆ, ತ್ರಿಕರಣಶುದ್ಧಿ ಹಾಗೂ ಗುರುಲಿಂಗಜಂಗಮರು ಸಾಕ್ಷಾತ್ ಶಿವನೆಂದು ತಿಳಿಯುವುದು ಮಹೇಶಸ್ಥಲದ ಲಕ್ಷಣ. ಪರಸ್ತ್ರೀ-ಪರಧನ ದೂರನಾಗಿ ಇಷ್ಟಲಿಂಗದಲ್ಲಿ ನಿಷ್ಠೆಯುಳ್ಳವನಾಗಿ, ಬಾಳೆಲ್ಲ ಶಿವಮಯ ಎಂದು ತಿಳಿದವನು ಮಹೇಶ, ತೀರ್ಥಯಾತ್ರೆ ಮಾಡದೆ, ಧರ್ಮನಿಂದೆ ಸಹಿಸದೆ, ಶಕುನ ನಂಬದೆ, ನಿಜಧರ್ಮ ತಿಳಿದವನು ಮಹೇಶ.

**ಪ್ರಸಾದಿ**

ಪ್ರಪಂಚವೆಲ್ಲ ಶಿವನ ಪ್ರಸಾದವೆಂದು ತಿಳಿವುದು. ತಾನು ಸ್ವೀಕರಿಸುವ ಪ್ರಸಾದವನ್ನು ಶಿವನಿಗೆ ಅರ್ಪಿಸಿ ಸ್ವೀಕರಿಸುವುದು. ಇದು ಅಗ್ನಿತತ್ವ. ಇದರಿಂದ ಅವನ ಅಹಂಕಾರ ಅಳಿಯುತ್ತದೆ. ಅರಿವು ಮೂಡುತ್ತದೆ. ಪ್ರಸನ್ನಭಾವದಿಂದ ಲಿಂಗಭೋಗೋಪಭೋಗಿಯಾಗಿ, ಹಸನ್ಮುಖಿಯಾಗಿರುವವನೇ ಪ್ರಸಾದಿ ಎನಿಸುತ್ತಾನೆ.

**ಪ್ರಾಣಲಿಂಗಿ**

ನಾನು, ನನ್ನದೆಂಬುದನ್ನು ಅಳಿದು ಎಲ್ಲವೂ ಲಿಂಗರೂಪವೆಂದು ಅರಿದು ಆಚರಿಸುವವನೇ ಪ್ರಾಣಲಿಂಗಿ. ಚಂಚಲತೆಯನ್ನು ಅಳಿದು ಏಕಾಗ್ರತೆಯನ್ನು ಪಡೆಯುವುದು, ಇಷ್ಟಲಿಂಗವನ್ನು ಅಂತರಂಗ-ಬಹಿರಂಗದಲ್ಲಿ ಪೂಜಿಸುವುದು, ಸಾಕಾರದಿಂದ ನಿರಾಕಾರದೆಡೆಗೆ ಸಾಗುವುದು ಪ್ರಾಣಲಿಂಗಿಯ ಲಕ್ಷಣ, ಜಡತ್ವ-ಮಮಕಾರಗಳನ್ನು ತೊಡೆದು, ಲಿಂಗವೂ-ತಾನೂ ಒಂದೇ ಎಂದು ಭಾವಿಸಿ, ಸರ್ವಾಂಗವೂ ಲಿಂಗವೆಂದು ತಿಳಿದು ಅನುಭಾವದಿಂದ ಭಕ್ತಿಯನ್ನು ಆಚರಿಸುವುದು ಪ್ರಾಣಲಿಂಗಿಯ ಲಕ್ಷಣವಾಗಿದೆ.

**ಶರಣ**

ಶರಣಸ್ಥಲದಲ್ಲಿ ಸಾಧಕನು ಅಪಾರ ಅನುಭವವನ್ನು, ಅಧ್ಯಾತ್ಮದ ಸಾಧನೆಯನ್ನು, ಅರಿವಿನ ಸಿರಿಯನ್ನು ಪಡೆದು ಪುಟವಿಟ್ಟ ಚಿನ್ನದಂತೆ ಶುದ್ಧನಾಗಿರುವವನೇ ಶರಣ. ಸತಿ-ಪತಿ ಭಾವದಿಂದ ಲಿಂಗವ ಪೂಜಿಸುತ್ತ, ಆನಂದದಿಂದ ಭಕ್ತಿಯನ್ನು ಆಚರಿಸುತ್ತ, ಆಕಾಶ ತತ್ವವನ್ನು ಮನದಲ್ಲಿ ಬೆರೆಸಿಕೊಂಡು ಜೀವನ ಪವಿತ್ರ ಮಾಡಿಕೊಳ್ಳುವವನೇ ಶರಣ. ನಿಷ್ಕಲಂಕ, ನಡೆ ಪರುಷ, ನುಡಿ ಪರುಷ, ಅನ್ಯರಿಗೆ ಮಾರ್ಗದರ್ಶಕ, ಅವಿರಳ ಜ್ಞಾನಿ ಅವನೇ ಶರಣ.